ಹೊನ್ನಾಳಿಯಲ್ಲಿ ತಾಲ್ಲೂಕು ಕಛೇರಿಯ ನಿರ್ಮಾಣ

೪೦೦ (೯೪೭) ಶ್ರೀ ಡಿ. ಜಿ. ಜಸವಂತಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಹೊನ್ನಾಳಿಯಲ್ಲಿರುವ ತಾಲ್ಲೂಕು ಕಛೇರಿಯು ಸುಮಾರು ನೂರು ವರ್ಷಗಳಷ್ಟು ಹಳೆಯದಾಗಿದ್ದು, ಹೊಸ ತಾಲ್ಲೂಕು ಕಛೇರಿಯನ್ನು ಕಟ್ಟಲು ಲೋಕೋಪಯೋಗಿ ಇಲಾಖೆಯವರೇ ನಾದರೂ ಮುಂಜೂರಾತಿ ಮಾಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಪ್ರಸಕ್ತ ವರ್ಷದಲ್ಲಿಯೇ ಕಟ್ಟಡವನ್ನು ಕಟ್ಟುವ ಕೆಲಸವನ್ನು ಸರ್ಕಾರ ದವರು ವ್ಯವಸ್ಥೆ ಮಾಡುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಮೊದಲನೆಯ ಪ್ರಶ್ನೆಯ ಉತ್ತರದ ಪ್ರಕಾರ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಡಿ. ಜಿ. ಜಸವಂತಗೌಡ.—ಸ್ವಾಮಿ, ಹೊನ್ನಾಳಿಯಲ್ಲಿರುವ ತಾಲ್ಲೂಕು ಕಛೇರಿಯು ನೂರು ವರ್ಷಗಳಷ್ಟು ಹಳೆಯದಾಗಿದ್ದುದರಿಂದ ಅಲ್ಲಿ ಹೊಸ ಕಟ್ಟಡವನ್ನು ಕಟ್ಟುವುದಕ್ಕೆ ಪಿಡಬ್ಲ್ಯೂಡಿ ಇಲಾಖೆಯವರು ಇದರ ಪ್ಲಾನ್, ಪುತ್ತು ಎಸ್ಟಿಮೇಟ್ ಅನ್ನು ಕಳುಹಿಸಿದ್ದಾರೆ. ಈ ಕೆಲಸವನ್ನು ಮುಂದಿನ ವರ್ಷವಾದರೂ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಈಗಾಗಲೇ ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ಎನ್ನುವುದನ್ನು ಈ ಸದನದಲ್ಲಿ ಹಲವಾರು ಸಾರಿ ತಿಳಿಸಲಾಗಿದೆ. ಸರ್ಕಾರದ ಅಭಿಪ್ರಾಯ ಏನೆಂದರೆ ಮೊದಲ ಆದ್ಯತೆ ನೀರಾವರಿಗೆ ಅನಂತರ ಎರಡನೆಯ ಆದ್ಯತೆ ರಸ್ತೆ ಕಾಮಗಾರಿ ಕೆಲಸಗಳಿಗೆ ಕೊಡಬೇಕು ಎನ್ನುವುದು.

ಶ್ರೀ ಎಂ. ಎಸ್. ಕೃಷ್ಣಪ್ಪ.—ಗಂಗಾರಾಂ ಕಟ್ಟಡ ಆದ ಹಾಗೆ ಆಗಿಬಿಟ್ಟರೆ ? ಅದಕ್ಕೆ ಮುಂಜಾಗ್ರತೆಯಾಗಿ ಮಾಡಿಬಿಟ್ಟರೆ ಒಳ್ಳೆಯದಲ್ಲವೇ ?

ಶ್ರೀ ಹೆಚ್.ಡಿ. ದೇವೇಗೌಡ.—ಎಲ್ಲಾ ಕಟ್ಟಡವೂ ಹಾಗಾಗುವುದಿಲ್ಲ. ಕಟ್ಟಡ ಭದ್ರ ಇಲ್ಲದೇ ಹೋದರೆ ಹಾಗಾಗುತ್ತದೆ. ಆ ಕಟ್ಟಡ ಭದ್ರ ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಆಣೆಕಟ್ಟು ಪ್ರಾರಂಭಿಸುವ ಕುರಿತಂ

೪೦೧ (೯೫೫) ಶ್ರೀ ಜಿ.ಎಸ್. ಬಾಗಲಕೋಟಿ (ಜಮಖಂಡಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿಪ್ಪರಗಿ ಆಣೆಕಟ್ಟಿನ ಬಗ್ಗೆ ಸರ್ಕಾರದವರು ಈಗಾಗಲೇ ಖರ್ಚು ಮಾಡಿರುವ ಹಣ ಎಷ್ಟು ?

ಆ) ಹಿಪ್ಪರಗಿ ಆಣೆಕಟ್ಟನ್ನು ತೀವ್ರವಾಗಿ ಪ್ರಾರಂಭ ಮಾಡಬೇಕೆಂದು ಆ ಭಾಗದ ಜನರ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಹಿಪ್ಪರಗಿ ಆಣೆಕಟ್ಟನ್ನು ತೀವ್ರವಾಗಿ ಪ್ರಾರಂಭ ಮಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೪೧೪.೮೫ ಲಕ್ಷ ರೂಪಾಯಿಗಳು.

ಆ) ಬಂದಿದೆ.

೧) ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳುವುದಕ್ಕಿಂತ ಮುಂಚಿತವಾಗಿ ನಾನು ಒಂದು ವಿಚಾರವನ್ನು ತಿಳಿಸುತ್ತೇನೆ. ಅದೇನೆಂದರೆ ನಾನು ಈ ಸ್ಥಳವನ್ನು ಪರಿಶೀಲನೆ ಮಾಡಿದ್ದೇನೆ. ಇದಕ್ಕೆ ಈಗಾಗಲೇ ೪ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಇದಕ್ಕೆ ೧೦೦ ಕೋಟಿ ರೂಪಾಯಿಗಳ ವೆಚ್ಚ ಮಾಡಬೇಕಾಗಿದೆ. ನಮ್ಮ ಹಣಕಾಸಿನ ಪರಿಸ್ಥಿತಿಯಿಂದ ಈ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳುವುದು ಕಷ್ಟ. ಅದರಲ್ಲಿ ಮೂರು ಭಾಗ ಮಾಡಬೇಕೆಂದಿದ್ದೇವೆ. ಒಂದು ಡ್ಯಾಂ ಕಟ್ಟಿ ನೀರು ನಿಲ್ಲಿಸುವುದು, ಎರಡನೆಯದು ಎರಡು ದಡದಲ್ಲೂ ಕೂಡ ರಿಸರ್ವಾಯರ್ ಕಟ್ಟಿ ಫ್ಲೋ ಆಫ್ ಇರಿಗೇಷನ್ ಮಾಡಿದರೆ ಅದು ಬಹಳ ಕಾಸ್ಟ್ಲಿಯಾಗುತ್ತದೆ. ಒಂದೊಂದು ಬಿತ ನೀರಾವರಿ ಯೋಜನೆ ಮಾಡಬೆ ಕಾದರೆ ೩೫ ಕೋಟಿ ರೂಪಾಯಿಗಳು ಬೇಕಾಗುತ್ತದೆ. ತಾಂತ್ರಿಕ ಪರಿಣತರ ಪ್ರಕಾರ ಈ ಕೆಲಸ ಮಾಡಬೇಕಾದರೆ ಇವೊತ್ತಿನ ದಿನಸ ಈ ಕೆಲಸ ಮಾಡುವುದು ಬಹಳ ಕಷ್ಟ.

ಶ್ರೀ ಜಿ.ಎಸ್. ಬಾಗಲಕೋಟಿ.—ಸ್ವಾಮಿ, ಅಥಣಿ ಮತ್ತು ಜಮಖಂಡಿ ತಾಲ್ಲೂಕಿನ ಅನೇಕ ಜನರಿಗೆ ಇದರಿಂದ ಬಹಳ ಉಪಯೋಗವಾಗುತ್ತದೆ. ಮಾನ್ಯ ಮಂತ್ರಿಗಳು ಈಗಾಗಲೇ ಆ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದಾರೆ. ಆದಷ್ಟು ಬೇಗ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಸ್ಥಳವನ್ನು ಪರಿಶೀಲನೆ ಮಾಡಿದ್ದೇನೆ. ಆ ಜನರೂ ಸಹ ಇವರ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಶ್ರೀಮಾನ್ ವಸಂತರಾವ್ ಪಾಟೀಲ್‌ರೂ ಕೂಡ ಒತ್ತಾಯ ಮಾಡಿದ್ದಾರೆ. ಆಲ್ಲಿ ಈ ಒಂದು ಬಿತ ನೀರಾವರಿ ಯೋಜನೆ ತೆಗೆದುಕೊಳ್ಳಬೇಕಾದರೆ ೩೦-೩೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆಲ್ಲಿ ಒಂದು ಮೇಸನರಿ ವಾಲ್ ಡ್ಯಾಂಗೆಕಟ್ಟಿ ರಿಸರ್ವಾಯರ್ ಮುಖಾಂತರ ಆ ನೀರನ್ನು ನಿಲ್ಲಿಸಿ, ನಿಂತಿರತಕ್ಕಂಥ ನೀರನ್ನು ಮೇಲಕ್ಕೆ ಎತ್ತ ಬೇಕಾಗುತ್ತದೆ, ಇದು ಬಹಳ ಕಾಸ್ಟ್ಲಿಯಾಗುತ್ತದೆ. ಆಲ್ಲಿ ಫ್ಲೋ ಇರಿಗೇಷನ್ ಮಾಡುವುದಕ್ಕೆ ಹಣ ಹೆಚ್ಚು ಬೇಕಾಗಿರುವುದರಿಂದ ಇದಕ್ಕೆ ರೈತರು ಮುಂದೆ ಬಂದರೆ ಅವರಿಗೆ ಕಮರ್ಷಿಯಲ್ ಬ್ಯಾಂಕ್ ಮುಖಾಂತರವಾಗಲಿ ಅಥವಾ ಯಾವುದಾದರೂ ಫೈನಾನ್ಸಿಂಗ್ ಇನ್ಸ್‌ಟ್ಯೂಷನ್ ಮುಖಾಂತರವಾಗಲಿ ಅವರು ಲೋನ್ ಪಡೆಯುವುದಕ್ಕೆ ಪ್ರಯತ್ನ ಮಾಡಿದರೆ ಸರ್ಕಾರವೂ ಸಹ ಉದಾರವಾಗಿ ಸಹಾಯ ಮಾಡುತ್ತದೆ ಎಂದು ನಾನು ಅವರಿಗೆ ತಿಳಿಸಿದ್ದೇನೆ. ಅದನ್ನು ಪರಿಶೀಲಿಸುತ್ತೇವೆಂದು ಆ ರೈತರೂ ಸಹ ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಹಿಪ್ಪರಗಿ ಬ್ಯಾರೇಜ್ ವಿಚಾರವಾಗಿ ನಾನು ಎರಡು ವಿಚಾರ ಕೇಳುತ್ತೇನೆ. ಒಂದನೆಯದು ಬರುವ ೭ನೇ ಯೋಜನೆಯಲ್ಲಾದರೂ ಕೂಡ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಏನಾದರೂ ನಡೆಸಿದ್ದೀರಾ ? ಎರಡನೆಯದಾಗಿ ೧೯೪೪-೪೫ ರಲ್ಲಾದರೂ ಈ ಬರಗಾಲದ ಪ್ರದೇಶಕ್ಕೆ ಹೆಚ್ಚು ಹಣ ಒದಗಿಸಿ ಈ ಯೋಜನೆಯನ್ನು ತ್ವರಿತವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಹೆಚ್.ಡಿ. ದೇವೇಗೌಡ.—೧೯೪೪-೪೫ರಲ್ಲಿ ಇದಕ್ಕೆ ಹೆಚ್ಚು ಹಣ ಒದಗಿಸಿಲ್ಲ ಎಂದರೆ ನಾನು ಈಗಾಗಲೇ ತಿಳಿಸಿದ್ದೇನೆ. ಇದು ಫ್ಯಾಮಿನ್ ರಿಲೀಫ್ ವರ್ಕ್‌ಗೂ ಸಹ ಬರುವುದಿಲ್ಲ. ಇದಕ್ಕೆ ಮೊದಲು ಮೇಸನರಿ ಡ್ಯಾಂ ಕಟ್ಟಬೆಕಾದರೆ ಮೊದಲು ವಾಲ್ ಹಾಕಬೆಕು. ಇದನ್ನು ಮಾಡಬೇಕಾದರೆ ಹೆಚ್ಚಿನ ವೆಚ್ಚವಾಗುತ್ತದೆ. ಆದರಿಂದ ಈ ಕೆಲಸವನ್ನು ತೆಗೆದುಕೊಳ್ಳುವುದು ಕಷ್ಟ. ಇನ್ನು ೭ನೇ ಯೋಜನೆಯಲ್ಲಿ ಈ ಅನ್ ಗೋಯಿಂಗ್ ಪ್ರಾಜೆಕ್ಟ್‌ನಲ್ಲಿ ಸ್ಪಿಲ್ ಓವರ್ ಕೆಲಸಕ್ಕೆ ಹಣ ಒದಗಿಸುವುದಕ್ಕೆ ಕಷ್ಟವಾಗಿದೆ. ಆ ಬಗ್ಗೆ ನಾನು ಈಗ ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಗಳಿಗೆ ಸೇರಿದವರನ್ನು ಇತರೇ ಜಾತಿಯವರು ವಿವಾಹವಾದರೆ ಅಂತವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯದ ಬಗ್ಗೆ

೪೦೩ (೧೦೦೫) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—